**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**
**ಸಿಸಿ ನಂಃ 1306/2024**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರಿ. ಸಿದ್ದಲಿಂಗರೆಡ್ಡಿ | ಡಿ.ಡಬ್ಲೂ 01 |
| ತಂದೆ ಹೆಸರುಃ | ತಿಪ್ಪಾರೆಡ್ಡಿ | |
| ವಯಸ್ಸುಃ | 43 ವರ್ಷ | ದಿಃ 02-04-2026 |
| ಉದ್ಯೋಗಃ | ಖಾಸಗಿ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಕಟಗಿಶಹಾಪೂರ | |

ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಆರ್. ಕೆ ವಕೀಲರಿಂದಃ

1 ನಾನು ಸನಃ 2021 ರಿಂದ ಹೈದರಾಬಾದನಲ್ಲಿ ಖಾಸಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಸುಮಾರು 10-15 ವರ್ಷಗಳಿಂದ ದೂರುದಾರನ ಪರಿಚಯವಿದೆ. ದೂರುದಾರ ಹಾಗೂ ಪಿಡಬ್ಲೂ-2 ಆನಂದರವರು ಸೇರಿಕೊಂಡು ವಿಶ್ವಜ್ಯೋತಿ ಎಂಬ ಹೆಸರಿನ ಪೈನಾನ್ಸ ಸಂಸ್ಥೆ ನಡೆಸುತ್ತಿದ್ದರು. ನಾನು ಅವಶ್ಯಕತೆ ಇದ್ದಾಗ ಸದರಿ ಸಂಸ್ಥೆಯಿಂದ ಸಾಲ ಪಡೆದುಕೊಳ್ಳುತ್ತಿದ್ದೇನು. ನಾನು ಸುಮಾರು 10-12 ಸಲ ಸದರಿ ಸಂಸ್ಥೆಯಿಂದ ಸಾಲ ಪಡೆದುಕೊಂಡಿದ್ದೇನು. ಸಾಲದ ಮರುಪಾವತಿ ಅವಧಿ 100 ದಿನಗಳ ವರೆಗೆ ಇರುತ್ತಿತ್ತು ಹಾಗೂ ಪ್ರತಿ ದಿನ ಕಂತು ಪಾವತಿ ಮಾಡುವ ಕರಾರು ಇರುತ್ತಿತ್ತು. ನಾನು ರೂ. 50,000/- ದಿಂದ ರೂ. 2 ಲಕ್ಷ ದವರೆಗಿನ ಮೊತ್ತದ ಸಾಲವನ್ನು ಪಡೆದುಕೊಂಡಿದ್ದೇನು. ನಾನು ರೂ. 50,000/- ಸಾಲ ತೆಗೆದುಕೊಂಡಾಗ ಅವರು ರೂ. 5,000/- ಬಡ್ಡಿ ಹಣವನ್ನು ಮುಂಗಡ ಪಾವತಿಸಿಕೊಂಡು ಉಳಿದ 45,000/- ಹಣವನ್ನು ನನಗೆ ಕೊಡುತ್ತಿದ್ದರು. ಅಂದರೆ 100 ದಿನಗಳಿಗೆ 10 ಪ್ರತಿಶತ ಬಡ್ಡಿಯನ್ನು ಮುಂಗಡ ಪಡೆದು ಉಳಿದ ಹಣವನ್ನು ನೀಡುತ್ತಿದ್ದರು. ಆದರೂ ಸಹ ನನ್ನಿಂದ 100 ದಿನಗಳಲ್ಲಿ ಸಂಪೂರ್ಣ ಸಾಲದ ಹಣವನ್ನು ಮರುಪಾವತಿ ಮಾಡಿಸಿಕೊಳ್ಳುತ್ತಿದ್ದರು. ನಾನು ಮೊದಲ ಬಾರಿಗೆ ಸದರಿ ಸಂಸ್ಥೆಯೊಂದಿಗೆ ವ್ಯವಹಾರ ಮಾಡುವಾಗ ಭದ್ರತೆಗಾಗಿ ನನ್ನ ಖಾತೆಯ ಚೆಕ್ಕನ್ನು ನೀಡಿದ್ದೇನು. ಸನಃ 2016 ರಲ್ಲಿ ಚೆಕ್ ಕೊಟ್ಟಿದ್ದೇನು.

2. ದೂರುದಾರ ನಾನು ಕೆಲಸ ಮಾಡುತ್ತಿದ್ದ ವೈನಶಾಪ್ ಹತ್ತಿರ ಬಂದು ಕರಾರು ಪತ್ರಕ್ಕೆ ನನ್ನ ಸಹಿ ಪಡೆದುಕೊಂಡಿದ್ದರು. ನಾನು ದೂರುದಾರನಿಗೆ ಸಂಪೂರ್ಣ ಸಾಲ ಮರುಪಾವತಿ ಮಾಡಿದ್ದೇನೆ. ನಾನು ಹಾಗೂ ಗುರುನಾಥರೆಡ್ಡಿ ಎಂಬಾತ ಸೇರಿಕೊಂಡು ವೈನಶಾಪ್ ನಡೆಸುತ್ತಿದ್ದೇವು. ಆದರೆ ನಮ್ಮ ನಡುವೆ ಬಿನ್ನಾಭಿಪ್ರಾಯ ಬಂದಿದ್ದರಿಂದ ಸನಃ 2020 ರಲ್ಲಿ ನಾವು ಸದರಿ ವ್ಯವಹಾರ ನಿಲ್ಲಿಸಿದ್ದೇವು. ಆನಂತರ ನಾನು ಹೈದರಾಬಾದನಲ್ಲಿ ಕೆಲಸ ಮಾಡಿಕೊಂಡಿದ್ದೇನೆ. ಗುರುನಾಥರೆಡ್ಡಿರವರ ಮಾತು ಕೇಳಿ ದೂರುದಾರ ನಾನು ಆತನಿಗೆ ಭದ್ರತೆಗಾಗಿ ನೀಡಿದ್ದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ನನ್ನ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿರಬಹುದು. ನಾನು ಸನಃ 2021 ರ ನಂತರ ಯಾವತ್ತೂ ದೂರುದಾರನಿಗೆ ಭೇಟಿಯಾಗಿಲ್ಲ. ನನಗೆ ದೂರುದಾರ ಕಳುಹಿಸಿದ ನೋಟಿಸು ಜಾರಿಯಾಗಿರುವುದಿಲ್ಲ. ನ್ಯಾಯಾಲಯದಿಂದ ವಾರೆಂಟ ಬಂದಾಗ ನನಗೆ ಈ ಪ್ರಕರಣದ ಬಗ್ಗೆ ಗೊತ್ತಾಗಿರುತ್ತದೆ. ನಾನು ದೂರುದಾರನಿಗೆ ಸಂಪೂರ್ಣ ಸಾಲ ಮರುಪಾವತಿ ಮಾಡಿದ ನಂತರವೇ ಹೈದಾರಾಬಾದಗೆ ಹೋಗಿದ್ದೇನು. ನಾನು ಕರಾರು ಪತ್ರದಂತೆ ಸಾಲದ ಹಣ ಮರುಪಾವತಿ ಮಾಡಿದ ಬಳಿಕ ಒಂದು ವರ್ಷದ ನಂತರ ಹೈದರಾಬಾದಗೆ ಹೋಗಿದ್ದೇನು. ಆದ್ದರಿಂದ ನನ್ನನ್ನು ಬಿಡುಗಡೆ ಮಾಡುವಂತೆ ಕೋರಿಕೊಳ್ಳುತ್ತೇನೆ.

ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯವನ್ನು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

ಜೆ.ಎಮ್.ಎಫ್.ಸಿ, ಯಾದಗಿರಿ.